## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಭೂಮಿಯೋಜನೆಯ ವ್ಯವಸ್ಥಿತ ನಿರ್ವಹಣೆಗಾಗಿ ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಸಮಿತಿಯನ್ನು ರಚಿಸುವ ಬಗ್ಗೆ.

__ಪ್ರಸ್ತಾವನೆ:__ ಭೂ ದಾಖಲೆಗಳ ಗಣಕೀಕರಣ - "ಭೂಮಿ" ಯೋಜನೆಯು ಜನಪ್ರಿಯವಾಗಿದೆ. ಈ ಯೋಜನೆಯ ಜನಪ್ರಿಯತೆ ಎಷ್ಟು ಹೆಚ್ಚಾಗಿದೆಯೋ ಅಷ್ಟರಮಟ್ಟಿಗೆ ಜನತೆಗೆ ಉತ್ತಮ ಸೇವೆ ಒದಗಿಸುವ ಹಾಗೂ ಅವರ ಸಮಸ್ಯೆಗಳಿಗೆ ಸ್ಪಂದಿಸುವ ಜವಾಬ್ದಾರಿಯೂ ಸಹ ಹೆಚ್ಚಾಗುತ್ತದೆಯೆಂಬುದೂ ಅಷ್ಟೇ ವಾಸ್ತವಿಕ. ಭೂಮಿ ಯೋಜನೆಯಡಿ ಪ್ರತಿದಿನ ಅಸಂಖ್ಯಾತ ಅರ್ಜಿಗಳು ದಾಖಲಾಗುತ್ತಿವೆ. ಅವುಗಳನ್ನು ವಿಪರೀತ ಶ್ರದ್ಧೆಯಿಂದ ವಿಲೇವಾರಿ ಮಾಡುತ್ತಿದ್ದರೂ ಸಹ ಪ್ರಗತಿಯ ಫಲಿತಾಂಶವು ಸರ್ಕಾರದ ನಿರೀಕ್ಷೆಯಷ್ಟಾಗಿಲ್ಲ ಎನ್ನುವುದನ್ನು ಗಮನಿಸಲಾಗಿದೆ. ಅದರಂತೆಯೇ ಭೂಮಿ ಕಾರ್ಯಾಚರಣೆಯನ್ನು ಜಿಲ್ಲಾ ಮಟ್ಟದಲ್ಲಿಯ ಒಂದು ಉಸ್ತುವಾರಿ ಸಮಿತಿ ಸ್ಥಾಪನೆಯ ಮೂಲಕ ಬಲಪಡಿಸಬೇಕೆಂದು ಸರ್ಕಾರ ಬಯಸಿದೆ. ಆದುದರಿಂದ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯನ್ನು ರಚಿಸಲು ಈ ಆದೇಶ.

__ಸರ್ಕಾರದ ಆದೇಶ ಸಂಖ್ಯೆ: ಕಂಇ 61 ಎಂಆರ್‌ಆರ್ 2004 ದಿನಾಂಕ: 18.12.2004__

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯನ್ನು ರಚಿಸಲು ಸರ್ಕಾರವು ಹರ್ಷಿಸುತ್ತದೆ.

| | |
|---|---|
| 1. ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2. ತಹಸೀಲ್ದಾರರು (ಚುನಾವಣೆ) | ಸದಸ್ಯ ಕಾರ್ಯದರ್ಶಿಗಳು |
| 3. ರೆವಿನ್ಯೂ ಹೆಡ್ ಮುನ್ಷಿ ಅಥವಾ ಭೂಮಿ ಶಿರಸ್ತೇದಾರರು | ಸದಸ್ಯರು |
| 4. ಭೂಮಿ ವಿಷಯ ನಿರ್ವಾಹಕರು | ಸದಸ್ಯರು |
| 5. ಜಿಲ್ಲಾ ಭೂಮಿ ಸಮಾಲೋಚಕರು | ಸದಸ್ಯರು |
| 6. ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರದ ಜಿಲ್ಲಾ ಮಾಹಿತಿ ಅಧಿಕಾರಿಗಳು | ಸದಸ್ಯರು |
| 7. ಫೆಸಿಲಿಟಿ ಮ್ಯಾನೇಜ್ಮೆಂಟ್ ನ ಜಿಲ್ಲಾ ಮುಖ್ಯಸ್ಥರು | ವಿಶೇಷ ಆಹ್ವಾನಿತರು |

ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯ ಆಶೋತ್ತರಗಳು ಈ ಕೆಳಕಂಡಂತಿರುತ್ತವೆ.

1. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ಸರ್ಕಾರ, ರಾಜ್ಯ ಮಟ್ಟದ ಭೂಮಿ ಉಸ್ತುವಾರಿ ಸಮಿತಿ ಮತ್ತು ತಾಲ್ಲೂಕು ಭೂಮಿ ಕೇಂದ್ರದ ನಡುವೆ ಸಮನ್ವಯವನ್ನು ಸಾಧಿಸಬೇಕು.
2. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು, ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳು ನಿರಂತರವಾಗಿ, ಸಮರ್ಪಕವಾಗಿ ಮತ್ತು ವ್ಯವಸ್ಥಿತವಾಗಿ ಕೆಲಸ ನಿರ್ವಹಿಸುವಂತೆ ನೋಡಿಕೊಳ್ಳಬೇಕು.

13. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ಆಡಳಿತ ಕ್ಷೇತ್ರವ್ಯಾಪ್ತಿಯಲ್ಲಿನ ಸಿಬ್ಬಂದಿವರ್ಗದವರ ನಿಯೋಜನೆ, ಪ್ರತಿ ನಿಯೋಜನೆ, ವರ್ಗಾವಣೆ ಮತ್ತು ತರಬೇತಿ ಇವುಗಳ ಪೂರ್ಣ ಹತೋಟಿಹೊಂದಿರುವರಲ್ಲದೆ ಭೂಮಿ ಯೋಜನೆಯಲ್ಲಿ ಕರ್ತವ್ಯಚ್ಯುತಿ ಎಸಗುವವರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಸಹ ಶಿಫಾರಸು ಮಾಡಬಹುದು.

14. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ಸಾರ್ವಜನಿಕರಿಗೆ ಉತ್ತಮ ಆಡಳಿತ ಒದಗಿಸುವ ನಿಟ್ಟಿನಲ್ಲಿ ಸಲಹೆ ಸೂಚನೆಗಳನ್ನು ಸೂಕ್ತ ಪ್ರಾಧಿಕಾರಕ್ಕೆ ಕಳಿಸಬಹುದು.

ಸರ್ಕಾರದ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಜೀವ್ ಚಾವ್ಲಾ)
ಸರ್ಕಾರದ ವಿಶೇಷ ಕಾರ್ಯದರ್ಶಿ (ಭೂಮಿ)
ಕಂದಾಯ ಇಲಾಖೆ

ಇವರಿಗೆ,

(1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
(2) ಎಲ್ಲಾ ಜಿಲ್ಲಾಧಿಕಾರಿಗಳು
(3) ಎಲ್ಲಾ ಉಪ ವಿಭಾಗಾಧಿಕಾರಿಗಳು
(4) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು.
(5) ಎಲ್ಲಾ ತಹಸೀಲ್ದಾರರುಗಳು
(6) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ
(7) ಸರ್ಕಾರದ ಕಾರ್ಯದರ್ಶಿ(ಭೂ ಸುಧಾರಣೆ)ಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ
(8) ಕಛೇರಿ ಪ್ರತಿ

123

3. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳಲ್ಲಿರುವ ಎಲ್ಲಾ ಯಂತ್ರ ಮತ್ತು ಉಪಕರಣಗಳು ಸಮರ್ಪಕವಾಗಿ ಮತ್ತು ಸದಾಕಾಲ ಸೇವೆಗೆ ಸಜ್ಜಾಗಿರುವಂತೆ ನೋಡಿಕೊಳ್ಳಬೇಕು. ಆಗತ್ಯವಿರುವ ಎಲ್ಲಾ ಸಂದರ್ಭಗಳಲ್ಲಿ ಫೆಸಿಲಿಟಿ ಮ್ಯಾನೇಜರ್ ರ ಸೇವೆಯನ್ನು ಸರಿಯಾಗಿ ಬಳಸಿಕೊಳ್ಳಬೇಕು. ಮತ್ತು ವಿಳಂಬವಾದ ಸೇವೆಗೆ ಸೂಕ್ತ ದಂಡ ವಿಧಿಸಬೇಕು.
4. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳಲ್ಲಿ ಆಗತ್ಯವಿರುವ ಎಲ್ಲಾ ನಮೂನೆಗಳು, ಲೇಖನ ಸಾಮಗ್ರಿಗಳು, ರಿಬ್ಬನ್ ಗಳು ಬ್ಯಾಕ್ ಅಪ್ ಟೇಪುಗಳು ಪಹಣಿ ಪತ್ರಿಕೆಗಳ ಪೂರ್ವಮುದ್ರಿತ ನಮೂನೆಗಳು ಮತ್ತು ಹಾಲೊಗ್ರಾಂಗಳು ಆಗತ್ಯವಿರುವಷ್ಟು ಪ್ರಮಾಣದಲ್ಲಿ ಸದಾಕಾಲ ದಾಸ್ತಾನು ಇರುವಂತೆ ನೋಡಿಕೊಳ್ಳಬೇಕು.
5. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳನ್ನು ಕಾಲಕಾಲಕ್ಕೆ ಪೂರ್ವನಿರ್ಧಾರಿತವಾಗಿಯೂ ಒಮ್ಮೊಮ್ಮೆ ಅನಿರೀಕ್ಷಿತವಾಗಿಯೂ ಭೇಟಿ ನೀಡಿ ಸವಿವರವಾಗಿ ತನಿಖೆಮಾಡಬೇಕು ಮತ್ತು ಸರ್ಕಾರಕ್ಕೆ ಹಾಗೂ ರಾಜ್ಯದ ಭೂಮಿ ಉಸ್ತುವಾರಿ ಕೋಶಕ್ಕೆ ವರದಿಮಾಡಬೇಕು.
6. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಸ್ವೀಕರಿಸಲ್ಪಡುವ ಎಲ್ಲಾ ಮ್ಯುಟೇಶನ್ ಕೋರಿಕೆಗಳ ಬಗ್ಗೆ ವಿಳಂಬವಿಲ್ಲದ ಹಾಗೂ ನಿಷ್ಪಕ್ಷಪಾತವಾದ ಕ್ರಮ ಕೈಗೊಳ್ಳಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳಬೇಕು.
7. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳ ಬಾಬ್ತು ಪ್ರತಿ ತಿಂಗಳೂ ಸಹ ಸರ್ಕಾರ ನಿಗದಿಪಡಿಸಿರುವ ನಿಯತಕಾಲಿಕ ವರದಿಗಳನ್ನು ಮತ್ತು ಭೂಮಿ ಬಳಕೆದಾರರ ಶುಲ್ಕದ ವರದಿಯನ್ನೂ ರಾಜ್ಯ ಮಟ್ಟದ ಭೂಮಿ ಉಸ್ತುವಾರಿ ಕೋಶ ಹಾಗೂ ಸರ್ಕಾರಕ್ಕೆ ಕಳಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು.
8. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳ ಬಾಬ್ತು ಪ್ರಗತಿಯನ್ನು ಪ್ರತಿ ತಿಂಗಳೂ ಕಂದಾಯ ಅಧಿಕಾರಿಗಳ ಸಭೆಯಲ್ಲಿ ಹಾಗೂ ವಿಶೇಷ ಸಭೆಗಳ ಮೂಲಕ ಪರಾಮರ್ಶಿಸಿ ವಿಳಂಬವನ್ನು ನಿಯಂತ್ರಿಸಬೇಕು ಮತ್ತು ವರದಿ ಸಲ್ಲಿಸಬೇಕು.
9. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳಲ್ಲಿ ಕಾಲಕಾಲಕ್ಕೆ ಬೆಳೆಯನ್ನು ಕಾಲೋಚಿತಗೊಳಿಸುವ ಪ್ರಕ್ರಿಯೆಯನ್ನು ಪರಾಮರ್ಶಿಸಿ ಸರ್ಕಾರ ಹೊರಡಿಸಿರುವ ವೇಳಾಪಟ್ಟಿಯಂತೆ ಕ್ರಮ ಜರುಗಿಸಬೇಕು.
10. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳ ವ್ಯಾಪ್ತಿಯಲ್ಲಿ ಸರ್ಕಾರದ ನಿರ್ದೇಶನದಂತೆ ಪ್ರತಿವರ್ಷವೂ ಸಹ ಒಂದು ಉಚಿತ ಪಹಣಿಯನ್ನು ರೈತರಿಗೆ ಸಕಾಲದಲ್ಲಿ ವಿತರಿಸಲು ಎಲ್ಲಾ ಆಗತ್ಯ ಕ್ರಮವನ್ನು ಜರುಗಿಸಬೇಕು.
11. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ತನ್ನ ವ್ಯಾಪ್ತಿಯ ಎಲ್ಲಾ ಭೂಮಿ ಹಾಗೂ ಕಿಯೋಸ್ಕ್ ಕೇಂದ್ರಗಳ ವ್ಯಾಪ್ತಿಯಲ್ಲಿ ಯಾಂತ್ರಿಕ ದೋಷಗಳನ್ನು ಫೆಸಿಲಿಟಿ ಮ್ಯಾನೇಜರ್ ರಿಗೆ ಹಾಗೂ ತಾಂತ್ರಿಕ ದೋಷಗಳನ್ನು ರಾಜ್ಯದ ಭೂಮಿ ಉಸ್ತುವಾರಿ ಕೋಶಕ್ಕೆ ವರದಿ ಮಾಡುವ ಪ್ರಕ್ರಿಯೆಯನ್ನು ಕಾಲಕಾಲಕ್ಕೆ ಪರಾಮರ್ಶಿಸಬೇಕು ಮತ್ತು ಆ ದೋಷವು ಪರಿಹಾರವಾಗುವವರೆಗೂ ಸಂಬಂಧಪಟ್ಟವರೊಂದಿಗೆ ನಿಕಟ ಸಂಪರ್ಕಹೊಂದಿ ಫಲಿತಾಂಶ ಸಾಧಿಸುವುದನ್ನು ಖಚಿತಪಡಿಸಿಕೊಳ್ಳಬೇಕು.
12. ಜಿಲ್ಲಾ ಭೂಮಿ ಉಸ್ತುವಾರಿ ಸಮಿತಿಯು ಪ್ರತಿ ತಿಂಗಳಿಗೊಮ್ಮೆಯಾದರೂ ಸಹ ಸಭೆ ಸೇರಲೇಬೇಕು.